ಇದೇ ರಸ್ತೆಯಲ್ಲಿ ಬರಬೇಕಾಗಿರುವುದರಿಂದ ಇದನ್ನು ಶೀಘ್ರಗತಿಯಲ್ಲಿ ಮಾಡಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಜೊತೆಗೆ ಇಲ್ಲಿ ಹತ್ತು ಚಕ್ರವಾಹನಗಳು ತುಂಬಾ ಬರುತ್ತಿವೆ. ಗಣಿಯ ವಾಹನಗಳು ಬರುತ್ತವೆ ಮತ್ತು ಬಿದಿರನ್ನು ತೆಗೆದುಕೊಂಡು ಹೋಗುವಂತಹ, ಟಿಂಬರ್ ವಾಹನಗಳು ಈ ರಸ್ತೆಯಲ್ಲಿ ಮಳೆಗಾಲದಲ್ಲಿ ಓಡಾಡುತ್ತಿರುವುದರಿಂದ ತೊಂದರೆಯಾಗಿದೆ. ಅವುಗಳನ್ನು ಮಳೆಗಾಲ ಕಳೆಯುವವರೆಗಾದರೂ ತಾತ್ಕಾಲಿಕವಾಗಿ ತಡೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಗುಂಡಿಗಳನ್ನು ಮುಚ್ಚುವ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮತ್ತು ಶೃಂಗೇರಿ ಭಾಗದಲ್ಲಿ ಈಗಾಗಲೇ ಕೆಲವು ಧಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈ ಕೆಲಸವನ್ನು ನಾನು ಮಾಡಿಸುತ್ತೇನೆ.

ಆ) ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು (ಅನುಬಂಧ I)

1. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 3ನೇ ಪಟ್ಟಿಯಲ್ಲಿರುವ 42 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. (ಅನುಬಂಧ II)

ಅಧ್ಯಕ್ಷರು : ಮಂಡಿಸಲಾಯಿತು.

ಅ) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಬೆಂಗಳೂರಿನ ನಾಗರಭಾವಿ ಪೋಲೀಸ್ ಸ್ಟೇಷನಲ್ಲಿ ಧನಂಜಯ ಎನ್ನುವ ವ್ಯಕ್ತಿ ಅಮಾನುಷವಾಗಿ ಸತ್ತಿರುವುದರ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಇವತ್ತು ಬೆಂಗಳೂರಿನ ನಾಗರಭಾವಿ ಪೊಲೀಸ್ ಸ್ಟೇಷನ್‌ನಲ್ಲಿ ಧನಂಜಯ ಎನ್ನುವ ವ್ಯಕ್ತಿ ಅಮಾನುಷವಾಗಿ ಸತ್ತಿದ್ದಾನೆ. ಇದು ಒಂದು ಲಾಕಪ್ ಸಾವು. ಇವತ್ತಿನ ದಿವಸಗಳಲ್ಲಿ ರಾಜ್ಯದಾದ್ಯಂತ ಈ ರೀತಿಯ ಲಾಕಪ್ ಸಾವುಗಳು ನಿರಂತವಾಗಿ ನಡೆಯುತ್ತಿವೆ. ಹಿಂದೆ ಇಂತಹ ಒಂದು ಸಣ್ಣ ವಿಚಾರ ಬಂದಾಗಲೂ ಸದನದಲ್ಲಿ ಕೋಲಾಹಲ ನಡೆದ ನಿದರ್ಶನಗಳು ಉಂಟು. ಬಹುಶಃ ಲಾಕಪ್ ಸಾವಿನ ಬಗ್ಗೆ ಪರಿಣಾಮಕಾರಿಯಾದಂಥ, ಸಮಗ್ರವಾದಂಥ ತನಿಖೆ ಆಗಬೇಕಾಗುತ್ತದೆ. ರಾತ್ರಿ ಹತ್ತೂವರೆ ಗಂಟೆಗೆ ಓಡಾಡುತ್ತಿದ್ದರು ಎಂದು ಹೇಳುತ್ತಾರೆ, ಅವರು ಕುಡಿದಿದ್ದರು ಎಂದು ಹೇಳುತ್ತಾರೆ. ಅವರನ್ನು ಸ್ಟೇಷನ್‌ಗೆ ಕರೆದುಕೊಂಡು ಹೋದರು ಎಂದು ಹೇಳುತ್ತಾರೆ.

ಲಾಕಪ್‌ನಲ್ಲಿ ಗಾಜನ್ನು ಒಡೆದು ಆ ಗಾಜಿನಲ್ಲಿ ತನ್ನ ಹೊಟ್ಟೆಯನ್ನು ತಿವಿದುಕೊಂಡು ಸತ್ತ ಎನ್ನತಕ್ಕಂಥಾದ್ದು ಇದು. ಅವರು ಹೇಳತಕ್ಕಂಥಾದ್ದು, ಇದು ಸತ್ಯ ಅಲ್ಲ. ಅಪ್ರಾಮಾಣಿಕವಾದ ಹೇಳಿಕೆಯನ್ನು ಪೊಲೀಸರು ನೀಡಿದ್ದಾರೆ. ಇದು ನಿಜಕ್ಕೂ ಪೊಲೀಸ್ ರಾಜ್ಯವನ್ನು ನಾಚಿಸುವಂತಹ ಪೋಲೀಸ್ ರಾಜ್ಯವೇ ಎನ್ನತಕ್ಕಂಥ ಪ್ರಶ್ನೆ ಉದ್ಭವವಾಗುತ್ತದೆ. ತಮಗೆ ನಾನು ಹೇಳುತ್ತಿದ್ದೇನೆ, ಬಹಳ

ಕಷ್ಟವಾಗಿದೆ, ಯಾರನ್ನು ಯಾವ ಗಳಿಗೆಯಲ್ಲಿ ಬೇಕಾದರೂ ಎಳೆದುಕೊಂಡು ಹೋಗಬಹುದು, ಲಾಕಪ್‌ನಲ್ಲಿ ಸತ್ತ ತಕ್ಷಣ ಹೊರಗಡೆ ಸತ್ತ, ಅಥವಾ ಅವನೇ ವಿಷ ತೆಗೆದುಕೊಂಡು ಎಂದು ಹೇಳುತ್ತಾರೆ. ಇದು ಎಲ್ಲಿಯಾದರೂ ಉಂಟೇ? ಲಾಕಪ್‌ನಲ್ಲಿ ಗಾಜನ್ನು ಒಡೆದು ಸಾಯುವಾಗ ಪೋಲೀಸ್‌ನವರು ಏನಾಗಿದ್ದರು? ಪೋಲೀಸ್‌ನವರು ಎಲ್ಲಿಗೆ ಹೋಗಿದ್ದರು? ಪೋಲೀಸ್ ಸ್ಟೇಷನ್‌ನಲ್ಲಿ ಯಾರೂ ಇರಲಿಲ್ಲವೇ? ಯಾರೂ ಅಲ್ಲಿ ನೋಡಿಕೊಳ್ಳುತ್ತಿರಲಿಲ್ಲವೇ? ಈ ಪ್ರಶ್ನೆ ಉದ್ಭವವಾಗುತ್ತದೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಶೂನ್ಯವೇಳೆಯಲ್ಲಿ ಹೀಗೆ ಮಾಡಿದರೆ ಹೇಗೆ? ಇಷ್ಟೊಂದು ಲಂಬಿಸಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಇದಕ್ಕೆ ಉತ್ತರ ಹೇಳಲಿ. ಸರ್ಕಾರ ಈ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಬೇಕು.

ಶ್ರೀ ಎಂ.ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಪ್ರಾಯಶಃ ಈ ದಿವಸದ ಮಧ್ಯಾಹ್ನದ ಒಳಗಾಗಿ ಅಥವಾ ನಾಳೆ ಬೆಳಿಗ್ಗೆ ಇದಕ್ಕೆ ಉತ್ತರವನ್ನು ಕೊಡುತ್ತೇವೆ.

ಅಧ್ಯಕ್ಷರು : ಈಗ ಮಾನ್ಯ ರಮೇಶ್‌ಕುಮಾರ್‌ರವರು....

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರ ಶೂನ್ಯ ವೇಳೆಯಲ್ಲಿ ಎತ್ತಿದ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಉತ್ತರ ಬಂದಿದೆ. ನಾನು ಉತ್ತರ ಕೊಡುತ್ತೇನೆ. ಅದರ ಪ್ರತಿಯನ್ನು ನಂತರ ಕೊಡುತ್ತೇನೆ. ಅದರ ವಿವರ ಈ ರೀತಿ ಇದೆ. ದಿನಾಂಕ 20–7–2004ರಂದು ರಾತ್ರಿ ಸುಮಾರು 10–30 ಗಂಟೆಗೆ ಹೊಯ್ಸಳ ಗಸ್ತು ವಾಹನವು ಕಾಮಾಕ್ಷಿಪಾಳ್ಯದ ಸರಹದ್ದಿನ ರಿಂಗ್ ರೋಡ್‌ನಲ್ಲಿ ಗಸ್ತು ಮಾಡುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಅದನ್ನು ನೋಡಿ ಓಡಲು ಪ್ರಾರಂಭಿಸುತ್ತಾರೆ. ಅದನ್ನು ಕಂಡು ಹೊಯ್ಸಳ ಸಿಬ್ಬಂದಿ ಯಾರೋ ಅಪರಾಧಿಗಳು ಎಂದು ಭಾವಿಸಿ ಅವರನ್ನು ಹಿಂಬಾಲಿಸಿ ಹಿಡಿಯುತ್ತಾರೆ. ಆ ವ್ಯಕ್ತಿಗಳು ತುಂಬಾ ಕುಡಿದಿದ್ದು, ಅವರನ್ನು ಸ್ಥಳದಲ್ಲಿ ವಿಚಾರಿಸಲು ಸಾಧ್ಯವಿಲ್ಲದಿದ್ದರಿಂದ ಜ್ಞಾನಭಾರತಿ ಪೋಲೀಸ್ ಠಾಣೆಗೆ ತಂದು ಅಲ್ಲಿಯ ಎಸ್ ಎಸ್ ಒ ಅವರಿಗೆ ಒಪ್ಪಿಸುತ್ತಾರೆ. ಠಾಣೆಗೆ ಬಂದ ಪಿ ಎಸ್ ಐ ಶ್ರೀನಿವಾಸ ಮೂರ್ತಿ ಅವರು ಅವರನ್ನು ನೋಡಿ, ಅವರು ತುಂಬಾ ಕುಡಿದಿದ್ದು ಆಗ ಯಾವುದೇ ವಿಚಾರಣೆಯನ್ನು ನಡೆಸಲು ಸಾಧ್ಯವಿಲ್ಲದಿದ್ದುದ್ದರಿಂದ ಅವರನ್ನು ಎ.ಎಸ್.ಐ. ಚನ್ನರಾಯಪ್ಪನವರ ಉಸ್ತುವಾರಿಗೆ ವಹಿಸಿ ಮನೆಗೆ ತೆರಳುತ್ತಾರೆ. ನಂತರ ಆ ವ್ಯಕ್ತಿಗಳನ್ನು ಚನ್ನರಾಯಪ್ಪ ಎ ಎಸ್ ಐ ಠಾಣೆಯ ಅಂಗಳದಲ್ಲಿ ಕುಳ್ಳಿರಿಸಿ ಅವರು ಮತ್ತು ಠಾಣೆಯ ಸೆಂಟ್ರಿ ಚಂದ್ರರಾವ್ ಇಬ್ಬರೂ ಠಾಣೆಯ ಮುಂಭಾಗದಲ್ಲಿ ವಿವಿಧ ಕೆಲಸಗಳಲ್ಲಿ ತೊಡಗಿರುತ್ತಾರೆ. ಆ ಸಂದರ್ಭದಲ್ಲಿ ಗಾಬರಿಗೊಂಡ ಅನುಮಾನಾಸ್ಪದ ವ್ಯಕ್ತಿಗಳಲ್ಲಿ ಒಬ್ಬರಾದ ಪ್ರಕಾಶ್ ಎಂಬುವವರು ಪಕ್ಕದಲ್ಲಿದ್ದ ಕಂಪ್ಯೂಟರ್ ಕೊಠಡಿಯ ಗಾಜು ಒಡೆದು ಸಣ್ಣ ಪುಟ್ಟ ಗಾಯ ಮಾಡಿಕೊಂಡಲ್ಲಿ ಅಲ್ಲಿಂದ ಬಿಡುಗಡೆ ಹೊಂದಬಹುದೆಂದು ತಿಳಿದು ಅಲ್ಲಿಯ ಗಾಜನ್ನು ಒಡೆದಿರುತ್ತಾರೆ. ಅದರಿಂದ ಅವರ ಕೈಗೆ ಸಾಮಾನ್ಯ ಗಾಯವಾಗಿರುತ್ತದೆ. ಗಾಜು ಒಡೆದು ಅಲ್ಲಿ ಬಿದ್ದ ದೊಡ್ಡ ಗಾಜಿನ ಚೂರನ್ನು ಮತ್ತೊಬ್ಬ ಅನುಮಾನಾಸ್ಪದವಾದ ವ್ಯಕ್ತಿ ಧನಂಜಯ ಇವರು ತೆಗೆದುಕೊಂಡು ತಮ್ಮ

ಹೊಟ್ಟೆಗೆ ಮತ್ತು ಎದೆ ಚುಚ್ಚಿಕೊಂಡು ಗಂಭೀರ ಗಾಯಗಳನ್ನು ಮಾಡಿಕೊಂಡಿರುತ್ತಾರೆ. ಇದನ್ನು ನೋಡಿದ ಚನ್ನರಾಯಪ್ಪ ಪಿ ಎಸ್ ಐ ಕೂಡಲೇ ವಿಕ್ಟೋರಿಯ ಆಸ್ಪತ್ರೆಗೆ ದಾಖಲು ಮಾಡುತ್ತಾರೆ. ವಿಕ್ಟೋರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಪಟ್ಟಿದ್ದ ಧನಂಜಯ ಸುಮಾರು ರಾತ್ರಿ 2–00 ಗಂಟೆಗೆ ಕೊನೆ ಉಸಿರು ಎಳೆಯುತ್ತಾರೆ. ಪ್ರಕಾಶ್ ಅವರಿಗೆ ಚಿಕಿತ್ಸೆ ನೀಡಿ ದೂರ ರೋಗಿಯಾಗಿ ಕಳುಹಿಸಲಾಗಿದೆ. ಈ ಸಂಬಂಧದಲ್ಲಿ ಜ್ಞಾನಭಾರತಿ ಪೊಲೀಸ್ ಠಾಣೆಯ ಮೊಕ್ಕದ್ದಮೆ ಸಂಖ್ಯೆ 188:2004 ಕಲಂ 309ರಲ್ಲಿ ಒಂದು ಕೇಸ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಠಾಣೆಗೆ ಕರೆದು ತಂದ ವ್ಯಕ್ತಿಗಳನ್ನು ಸರಿಯಾಗಿ ನೋಡಿಕೊಳ್ಳದೇ ನಿರ್ಲಕ್ಷ್ಯ ಮಾಡಿದ ಚನ್ನರಾಯಪ್ಪ ಎ ಎಸ್ ಐ ಹಾಗೂ ಸೆಂಟ್ರಿ ಚಂದ್ರರಾವ್ ಅವರನ್ನು ಅಮಾನತ್ತು ಮಾಡಲಾಗಿದೆ. ಮತ್ತು ಅವರ ಮೇಲೆ ಕೆ ಎಸ್ ಪಿ ಡಿಪಿ ನಿಯಮ 6ರ ಅನ್ವಯ ಒಂದು ಇಲಾಖಾ ವಿಚಾರಣೆಯನ್ನು ಮಾಡಲು ಆದೇಶಿಸಲಾಗಿದೆ. ಮೃತರ ಬಂಧುಗಳಿಗೆ ವಿಷಯ ತಿಳಿಸಿ ಶವದ ಅಂತಿಮಕ್ರಿಯೇ ಮಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಾನೂನು ಸುವ್ಯವಸ್ಥೆಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪರಿಸ್ಥಿತಿ ಶಾಂತವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಪೋಲೀಸರ ಹೇಳಿಕೆ ಸತ್ಯಕ್ಕೆ ದೂರವಾಗಿರತಕ್ಕಂಥ ಹೇಳಿಕೆ. ಪೋಲೀಸರೇ ಹೊಡೆದು ಕೊಂಡಿರತಕ್ಕಂಥಾದ್ದು ಬರೀ ಗ್ಲಾಸ್‌ನಲ್ಲಿ ಚುಚ್ಚಿಕೊಂಡು ಸಾಯತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ. ಕುಡಿದು ಓಡಾಡುತ್ತಾರೆ ಅಂದರೆ ಹಾಗಾದರೆ ಬೆಂಗಳೂರು ನಗರದಲ್ಲಿ ಕುಡಿದು ಓಡಾಡುವವರೆಲ್ಲರನ್ನೂ ಇವರು ದಸ್ತಗಿರಿ ಮಾಡುತ್ತಾರಾ? ಬೆಂಗಳೂರಿನಲ್ಲಿ ನೀವೇ ಹಾದಿ ಬೀದಿಗಳಲ್ಲಿ ಬಾರ್‌ಗಳಿಗೆ ಲೈಸೆನ್ಸ್ ಕೊಟ್ಟಿದ್ದೀರಿ. ಯಾರೂ ಬೇಕಾದರೂ ಕುಡಿಯಬಹುದು, ಯಾರು ಬೇಕಾದರೂ ತೂರಾಡಬಹುದು, ಪೊಲೀಸ್ ಸ್ಟೇಷನ್‌ನಲ್ಲಿ ಕೊಲೆಯಾಗಿರತಕ್ಕಂಥಾದ್ದು.....

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಹಿರಿಯರಿದ್ದೀರಿ. ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ. ಉತ್ತರವನ್ನು ನಾವು ಕೊಟ್ಟಿದ್ದೇವೆ. ತಮಗೆ ಆ ಉತ್ತರ ಸಮಾಧಾನ ತರಲಿಲ್ಲ ಅಂದರೆ ತಾವು ಮತ್ತೊಂದು ರೂಪದಲ್ಲಿ ತನ್ನಿ. ಅದನ್ನು ಚರ್ಚೆ ಮಾಡಬಹುದು.

ಅಧ್ಯಕ್ಷರು : ನಿಯಮಾವಳಿಗಳನ್ನು ಪಾಲಿಸತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ. ದಯಮಾಡಿ ಸಹಕರಿಸಬೇಕು. ಮಾನ್ಯ ರಮೇಶ್ ಕುಮಾರ್‌ರವರು....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಪೊಲೀಸ್ ಸ್ಟೇಷನ್‌ನಲ್ಲಿ ಸಾವಾಗಿದೆ. ಸದನ ನಡೆಯುತ್ತಿದೆ. ಯಾರೂ ಕೇಳುವವರು ಇಲ್ಲ. ಇದು ಸರಿಯಲ್ಲ. ಇದು ಬಹಳ ಅನ್ಯಾಯ. ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಲು ಮುಂದಾದರು)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ನೀವು ನಿಮ್ಮ ಕುರ್ಚಿಗೆ ಬನ್ನಿ ನೀವು ಇಲ್ಲ ಅಂದರೆ ಆ ಕುರ್ಚಿ ಮರ್ಯಾದೆ ಹೋಗುತ್ತದೆ. ದಯವಿಟ್ಟು ಬನ್ನಿ.

ಶ್ರೀ ಎಂ.ಪಿ. ಪ್ರಕಾಶ್ : ನೀವು ಮುಖ್ಯಮಂತ್ರಿಯಾದರೆ ಏನು ಮಾಡುತ್ತೀರಿ? ಪೊಲೀಸ್‌ನವರನ್ನೆಲ್ಲಾ ಒಂದೇ ಸಲ ತೆಗೆದುಬಿಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಮಾಡಿ ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) : ನಾವು ಏನು ಮಾಡವುದು ನೀವು ಯಾವಾಗಲೂ ಒಂಟಿ ಒಂಟಿಯಾಗಿಯೇ ಆರಿಸಿ ಬರುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ಒಂದು ನಿಮಿಷ. ನನ್ನನ್ನು ತಾವು ಮುಖ್ಯ ಮಂತ್ರಿಯಾದರೆ ಏನು ಮಾಡುತ್ತೀರಿ ಎಂದು ಮಾನ್ಯ ಹಿರಿಯ ಸಚಿವರಾದವರು ಕೇಳುತ್ತಿದ್ದಾರೆ. ನಾನು ಅವರನ್ನು ಈ ಸದನದಲ್ಲಿ ಕೇಳುತ್ತಿದ್ದೇನೆ. ಒಂದು ಸಲ ನನ್ನನ್ನು ಮುಖ್ಯಮಂತ್ರಿ ಮಾಡಿ ನೋಡಿ ಎಂದು ನೀವು ಯಾವುದನ್ನೂ ಲಘುವಾಗಿ ಕಾಣತಕ್ಕಂಥಾದ್ದು ಅಲ್ಲ. ನಾನು ಮುಖ್ಯಮಂತ್ರಿಯಾಗತಕ್ಕಂಥ ಕಾಲವನ್ನು ತಾವು ನೋಡತಕ್ಕಂಥ ಕಾಲ ಬಂದೇ ಬರುತ್ತದೆ. ಆದ್ದರಿಂದ ನಾನು ಸರ್ಕಾರದ ಹೇಳಿಕೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಾಟಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಮುಖ್ಯಮಂತ್ರಿಯಾಗಬೇಕಾದರೆ ಅಲ್ಲಿ ಮಾನ್ಯ ಯಡಿಯೂರಪ್ಪನವರು ಒಪ್ಪಬೇಕು. ಇತರರು ಒಪ್ಪಬೇಕು ಅಮೇಲೆ.

ಶ್ರೀ ವಾಟಾಳ್ ನಾಗರಾಜ್ : ನಾನು ಮುಖ್ಯಮಂತ್ರಿಯಾಗುವುದನ್ನು ಮಾನ್ಯ ಅಧ್ಯಕ್ಷರೇ ತಾವು, ಮಾನ್ಯ ಖರ್ಗೆಯವರು, ಪ್ರಕಾಶ್‌ರವರು ಎಲ್ಲರೂ ನೋಡುತ್ತೀರಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಬೀ.ಚಿ.ಯವರು ಕೇಳುತ್ತಾರೆ ನೀವು ಮುಖ್ಯಮಂತ್ರಿಯಾದರೆ ಏನು ಮಾಡುತ್ತೀರಿ ಅಂತ ಆಗ ತಿಮ್ಮ ಉತ್ತರ ಕೊಡುತ್ತಾನೆ, ನಾನು ಮುಖ್ಯಮಂತ್ರಿಯಾದ ದಿವಸ ನನ್ನನ್ನು ನಾನೇ ಜಿಲ್ಲಾಧಿಕಾರಿಯನ್ನಾಗಿ ನೇಮಕ ಮಾಡಿಕೊಂಡು ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಡುತ್ತೇನೆಂದು ಹೇಳುತ್ತಾನೆ.

ಶ್ರೀ ವಾಟಳ್ ನಾಗರಾಜ್ : ನಾನು ಮುಖ್ಯ ಮಂತ್ರಿ ಆಗುವ ದಿವಸ ಬಹಳ ದೂರವಿಲ್ಲ. ನಾನು ಮುಖ್ಯಮಂತ್ರಿ ಆಗುತ್ತೇನೆ.

ಮಾನ್ಯ ಸದಸ್ಯರು : ಕರುಣಾ ನಿಧಿಯವರು ಕಪ್ಪು ಕನ್ನಡಕ ಹಾಕಿದರಿಂದ ಮುಖ್ಯಮಂತ್ರಿ ಆಗಿದ್ದರು ಹಾಗೆಯೇ ಶ್ರೀ ವಾಟಳ್‌ರವರಿಗೂ ಆಯೋಗ ಇರಬಹುದು.

ಆ) ಕೋಲಾರ ಜಿಲ್ಲೆಯಲ್ಲಿ ಉತ್ಪಾದನೆಯಾಗತಕ್ಕಂಥ ರೇಷ್ಮೆಗೂಡಿನ ಬೆಲೆ ಕುಸಿದಿರುವುದರ ಬಗ್ಗೆ

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕಂಥ ರೇಷ್ಮೆಯಲ್ಲಿ ಮೂರನೇ ಎರಡು ಭಾಗದಷ್ಟು ಕಾಣಿಕೆಯನ್ನು ಕೊಡುತ್ತಿದೆ. ಕಳೆದ ಕೆಲವು ದಿವಸಗಳಿಂದ ಮಾರುಕಟ್ಟೆಯಲ್ಲಿ ರೇಷ್ಮೆ ಗೂಡಿನ ಬೆಲೆ ಬಹಳ ಕುಸಿದಿದೆ. ರೈತ ಕಂಗಾಲಾಗಿದ್ದಾನೆ. ಸದನದ ಸಮಯವನ್ನು ಬಳಸಿ ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ಇಂಥಾದ್ದೇ ಸ್ಥಿತಿ ಉದ್ಭವವಾದಾಗ ಆಗಿನ ಸರ್ಕಾರ ದೊಡ್ಡ ಮನಸ್ಸು ಮಾಡಿ ರೈತನ ನೆರವಿಗೆ ಬರುವುದಕ್ಕೆ ಒಂದು ಕೆ.ಜಿ.ಗೆ 10 ರೂಪಾಯಿಗಳಂತೆ ಬೆಂಬಲ